ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ-577134, ಚಿಕ್ಕಮಗಳೂರು ಜಿಲ್ಲೆ.

## ನಾಣ್ಯಗಳ ಪ್ರಾತ್ಯಕ್ಷಿಕೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ

ಇತಿಹಾಸ ವಿಭಾಗ, ಅರ್ಥಶಾಸ್ತ್ರ ವಿಭಾಗ ಮತ್ತು ಐ.ಕ್ಯೂ.ಎ.ಸಿ ಸಹಯೋಗದಲ್ಲಿ
ದಿನಾಂಕ:27.08.2021

ಸ್ಥಳ: ಕಾಲೇಜಿನ ಆವರಣ

ಸಮಯ: ಬೆಳಿಗ್ಗೆ 11.00 ಗಂಟೆ

ಪ್ರಾರ್ಥನೆ : ಗಗನ, ಪ್ರಥಮ ಬಿಎ

ಸ್ವಾಗತ ಮತ್ತು ಪರಿಚಯ : ಪ್ರೊ. ನಾಗೇಶ ಗೌಡ ಡಿ. ಮುಖ್ಯಸ್ಥರು, ಇತಿಹಾಸ ವಿಭಾಗ.

ಪ್ರಾಸ್ತಾವಿಕ ನುಡಿ : ಡಾ. ಸೈಯದ್ ನಿಜಾಮುದ್ದೀನ್, ಸಂಚಾಲಕರು ಐ.ಕ್ಯೂ.ಎ.ಸಿ.

ಮುಖ್ಯ ಅತಿಥಿಗಳ ಭಾಷಣ : ಡಾ. ಕೆ.ಜಿ. ವೆಂಕಟೇಶ್ , ಎಂ.ಎ., ಪಿ.ಹೆಚ್.ಡಿ,
ಸಹ ಪ್ರಾಧ್ಯಾಪಕರು, ಡಿ.ವಿ.ಎಸ್ ಕಾಲೇಜು ಶಿವಮೊಗ್ಗ.

ವಿಷಯ : "ನಾಣ್ಯಗಳು ನಡೆದು ಬಂದ ದಾರಿ ಮತ್ತು ವರ್ತಮಾನ ಸಂದರ್ಭ"

ನಾಣ್ಯಗಳ ಪ್ರದರ್ಶನ ಮತ್ತು ಮಾಹಿತಿ : ಶ್ರೀ ಮೋಹನ್‌ರಾಜ್ ಪರಿಸರ, ಕಾಲೇಜಿನ ಹಳೆಯ ವಿದ್ಯಾರ್ಥಿ.

ಅಧ್ಯಕ್ಷತೆ : ಡಾ. ಉಮೇಶ್ ಕೆ, ಪ್ರಿನ್ಸಿಪಾಲರು, ಸ.ಪ್ರದ ಕಾಲೇಜು, ನರಸಿಂಹರಾಜಪುರ.

ವಂದನಾರ್ಪಣೆ : ಪ್ರೊ. ಚಂದ್ರಶೇಖರ್ ಜೆ.ಪಿ., ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ.

ನಿರೂಪಣೆ : ಡಾ. ಅಣ್ಣಪ್ಪ ಎನ್., ಮಳೀಮಠ್ , ಮುಖ್ಯಸ್ಥರು ಕನ್ನಡ ವಿಭಾಗ.

Scanned by CamScanner

ಪ್ರಜಾವಾಣಿ - ದಿನಾಂಕ - 28-08-2021

## ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಕೆ.ಜಿ.ವೆಂಕಟೇಶ್ ಅಭಿಮತ

# ಇತಿಹಾಸ ರಚನೆಗೆ ನಾಣ್ಯ ಮೂಲ ಆಧಾರ

ಪ್ರಜಾವಾಣಿ ವಾರ್ತೆ




ನರಸಿಂಹರಾಜಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕುವೆಂಪು ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಕೆ.ಜಿ ವೆಂಕಟೇಶ್ ಮಾತನಾಡಿದರು

ನರಸಿಂಹರಾಜಪುರ: 'ಇತಿಹಾಸ ರಚಿಸಲು ನಾಣ್ಯಗಳು ಮೂಲಾಧಾರ ಅದನ್ನು ಸರಿಯಾಗಿ ಬೆಳಸಿದರೆ ಅನೇಕ ಇತಿಹಾಸವನ್ನು ಹೊಸದಾಗಿ ರಚಿಸಬಹುದು' ಎಂದು ಕುವೆಂಪು ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಕೆ.ಜಿ ವೆಂಕಟೇಶ್ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಇತಿಹಾಸ ಮತ್ತು ಅರ್ಥಶಾಸ್ತ್ರ ವೇದಿಕೆಯಿಂದ ಆಯೋಜಿಸಿದ್ದ 'ನಾಣ್ಯಗಳು ನಡೆದು ಬಂದ ದಾರಿ ಮತ್ತು ವರ್ತಮಾನದ ಸಂದರ್ಭ' ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ವಸ್ತು ವಿನಿಮಯ ಪದ್ಧತಿಯಲ್ಲಿನ ಸಮಸ್ಯೆ ಗಮನಿಸಿದ ಆಗಿನ ಜನ ವಿನಿಮಯ ಮಾಧ್ಯಮವಾಗಿ ನಾಣ್ಯವನ್ನು ಬಳಕೆಗೆ ತಂದರು ಎಂದರು.

ಬೇರೆ ಬೇರೆ ದೇಶದಲ್ಲಿ ವಿಭಿನ್ನ ರೀತಿಯ ನಾಣ್ಯಗಳು ಇದ್ದು ಮೀನಿನ ಗಾಳ, ತಿಮಿಂಗಿಲದ ಹಲ್ಲು, ಆನೆಯ ಬಾಲ ಸೀಳುನಾಯಿ ಹಲ್ಲು, ಶಿಲುಬೆ, ಕೋಕೋ ಬೀಜ, ಟೀ ಪುಡಿ ಸಹ ನಾಣ್ಯವಾಗಿ ಬಳಸಲಾಗುತ್ತಿತ್ತು ಎಂದರು.

ಭಾರತದಲ್ಲಿ ವೇದಗಳ ಕಾಲದಲ್ಲಿ ನಿಷ್ಕ ಎಂಬ ನಾಣ್ಯ ವಿತ್ತು, ಬನವಾಸಿಯ ಕದಂಬರು ಪದ್ಮಟಂಕ, ತಲಕಾಡಿನ ಗಂಗರು ಗ್ರ್ಯಾಮಿ, ಬಾದಾಮಿಯ ಚಾಲುಕ್ಯರು ವರಾಹ, ರಾಷ್ಟ್ರಕೂಟರು ಸುವರ್ಣ, ಹೊಯ್ಸಳರು ಹೊನ್ನು ,ನಾಣ್ಯವನ್ನು, ಚಿತ್ರದುರ್ಗದ ಪಾಳೆಗಾರರು ದುರ್ಗಿ, ಯಲಹಂಕ ಅರಸರು ಭೈರವ, ಹಾಗೂ ಹೈದರಾಲಿ ಪಗೋಡ ಎಂಬ ನಾಣ್ಯವನ್ನು ಜಾರಿಗೆ ತಂದರು.

ಅನೇಕ ಮುಸ್ಲಿಂ ರಾಜರು ಹಿಂದೂ ಭಕ್ತರಾಗಿದ್ದು ಪೃಥ್ವಿರಾಜ್ ಚೌಹಾಣ್ ಸೋಲಿಸಿದ ಮಹಮ್ಮದ್ ಘೋರಿ ಲಕ್ಷ್ಮಿ ಚಿತ್ರದ ನಾಣ್ಯ, ಹೈದರನು ಶಿವ ಪಾರ್ವತಿ, ಅಕ್ಬರ್, ರಾಮ- ಸೀತೆಯ ಚಿತ್ರವಿರುವ ನಾಣ್ಯವನ್ನು ಚಲಾವಣೆಗೆ ತಂದರು. ರಾಯಚೂರು ಜಿಲ್ಲೆಯ ಚಿಕ್ಕ ಸಂದಿಯಲ್ಲಿ ಸಿಕ್ಕ ತಾಮ್ರದ ಪಾತ್ರೆಯಲ್ಲಿ 5534 ನಾಣ್ಯಗಳು ಇದ್ದವು ಎಂದು ಹೇಳೀದರು.

ಕರ್ನಾಟಕದಲ್ಲಿ ಒಂದೇ ಕಡೆ ಸಿಕ್ಕ ಅತ್ಯಂತ ಹೆಚ್ಚಿನ ನಾಣ್ಯ ಇದಾಗಿದೆ. ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಕೊಡೂರಿನಲ್ಲಿ ಸಿಕ್ಕಮಣ್ಣಿನ ಮಡಿಕೆಯಲ್ಲಿ 15,463 ಚಿನ್ನದ ನಾಣ್ಯ ಸಿಕ್ಕಿತು ಇದು ದೇಶದಲ್ಲಿಯೇ ಒಂದೇ ಕಡೆ ದೊರೆತ ಹೆಚ್ಚು ನಾಣ್ಯ ಎಂದರು.

### 'ಅಮೂಲ್ಯ. ಮಾಹಿತಿ'

'ನಾಣ್ಯಗಳು ಇತಿಹಾಸದ ಅಮೂಲ್ಯ ಆಧಾರಗಳಾಗಿವೆ. ಅವುಗಳಲ್ಲಿ ರಾಜನ ಕಾಲಮಾನ, ಬಿರುದು, ಆಸಕ್ತಿ, ಅಭಿರುಚಿ, ವಂಶಾವಳಿಗಳ ಬಗ್ಗೆ ಅಮೂಲ್ಯ ಮಾಹಿತಿ ಇದೆ' ಎಂದು ಇತಿಹಾಸ ಅಧ್ಯಾಪಕರ ಸಂಘ ಅಧ್ಯಕ್ಷ ಡಾ.ಕೆ.ಜಿ.ವೆಂಕಟೇಶ್ ಹೇಳಿದರು.

ನಾಣ್ಯಗಳನ್ನು ಪಂಚ್ ಮಾರ್ಕ್ ಹಾಕುವುದರ ಮೂಲಕ ಎರಕ, ಅಚ್ಚು, ಮುದ್ರಾ, ಉಬ್ಬು ವಿನ್ಯಾಸಗಳಿಂದ ಮಾಡಲಾಗುತ್ತಿತ್ತು, ಚಿನ್ನ, ಬೆಳ್ಳಿ, ತಾಮ್ರ ನಾಣ್ಯಗಳು ಹೆಚ್ಚಿದ್ದು ನಂತರ ಇತರ ಲೋಹದ ನಾಣ್ಯಗಳು, ಕಾಗದದ ನೋಟುಗಳು ತಯಾರಾದವು ನಾಣ್ಯಗಳಿಂದ ರಾಜನ ಕಾಲ ಆಗಿನ ಉದ್ಯೋಗ, ಆರ್ಥಿಕ ಸ್ಥಿತಿ, ಬೇಟೆಗಾರಿಕೆ, ಪ್ರಯಾಣ, ಬೆಳೆ, ಭಾಷೆ, ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಬಹುದು ಎಂದರು.

ಪ್ರಾಂಶುಪಾಲ ಡಾ.ಕೆ.ಉಮೇಶ್ ಅಧ್ಯಕ್ಷತೆವಹಿಸಿ ಮಾತನಾಡಿದರು. ಇತಿಹಾಸ ವಿಭಾಗದ ಮುಖ್ಯಸ್ಥ, ನಾಗೇಶ್ ಗೌಡ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸೈಯದ್ ನಿಜಾಮುದ್ದೀನ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಅಣ್ಣಪ್ಪ ಎನ್. ಮಳೀಮಠ್ , ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಜೆ.ಪಿ.ಚಂದ್ರಶೇಖರ್, ಸಮಾಜಶಾಸ್ತ್ರ ಉಪನ್ಯಾಸಕ ಲಕ್ಷ್ಮಣ್ ನಾಯ್ಕ್ ಇದ್ದರು.

ಕಾಲೇಜಿನ ಹಳೆಯ ವಿದ್ಯಾರ್ಥಿ ಮೋಹನರಾಜ್ ಪರಿಸರ ಅವರಿಂದ ನಾಣ್ಯ ಮತ್ತು ನೋಟು ಪ್ರದರ್ಶನ ಏರ್ಪಡಿಸಲಾಗಿತ್ತು.

Scanned by CamScanner